ರೂ. 15,000 ಪಾವತಿಸಿರುವ ರೈತರಿಗೆ ವಿದ್ಯುತ್ ಪರಿವರ್ತಕ ಅಳವಡಿಸುವುದು

245 (327) ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. (ಗುಬ್ಬಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ಗುಬ್ಬಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಲು ರೂ.15,000 ಮೊತ್ತವನ್ನು ಪಾವತಿಸಿರುವ ರೈತರ ಸಂಖ್ಯೆ ಎಷ್ಟು; (ಪೂರ್ಣ ವಿವರಗಳನ್ನು ನೀಡುವುದು)

ಆ) ರೂ.15,000 ಹಣ ಪಾವತಿಸಿರುವ ರೈತರಿಗೆ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಅಳವಡಿಸಲಾಗುವುದು;

ಈ) ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶೋಭಾ ಕರಂದ್ಲಾಜೆ (ಇಂಧನ ಸಚಿವರು) ;–

ಅ) ಆ) ಮತ್ತು ಇ)

ಗುಬ್ಬಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 152 ಸಂಖ್ಯೆಯ ರೈತರು ತಮ್ಮ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕಾಗಿ ರೂ.15,000/–ಗಳನ್ನು ಪಾವತಿಸಿರುತ್ತಾರೆ. ಈ ನೀರಾವರಿ ಪಂಪುಸೆಟ್ಟುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ) ಹೌದು. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಎಲ್ಲಾ ವಿಭಾಗಗಳಲ್ಲಿಯೂ ಪರಿವರ್ತಕ ರಿಪೇರಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳನ್ನು ರಿಪೇರಿಯಾಗಿರುವ ಪರಿವರ್ತಕಗಳಿಂದ ಬದಲಾವಣೆ ಮಾಡಲಾಗುತ್ತಿದೆ ಹಾಗೂ ಹೊಸ ಪರಿವರ್ತಕಗಳನ್ನು ಸಹ ತುರ್ತು ಸಂದರ್ಭಗಳಲ್ಲಿ ಬದಲಾವಣೆಗಾಗಿ ಸರಬರಾಜು ಮಾಡಲಾಗುತ್ತಿದೆ.